**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಅನುಷ್ಠಾನಗೊಳಿಸುತ್ತಿರುವ **"ಜೀಜಾವು ಜಲಭಾಗ್ಯ ಯೋಜನೆ"**ಯ ಫಲಾನುಭವಿಗಳಿಗೆ DBT ಮೂಲಕ ಪಾರದರ್ಶಕವಾಗಿ ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ:ಹಿಂವಕ 373 ಬಿಎಂಎಸ್ 2021 ದಿನಾಂಕ:05.07.2022
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ಕಮಸಅನಿನಿ/ಸಿಆರ್-35/2022-23, ದಿ:14.09.2022.

*********

**ಪ್ರಸ್ತಾವನೆ:-**

ಮೇಲೆ ಓದಲಾದ (1)ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳಿಗೆ DBT ಮೂಲಕ ಷರತ್ತುಗಳನ್ವಯ ಸಹಾಯಧನ ಮತ್ತು ಸಾಲ ನೀಡಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ (2)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ನಿಗಮದಲ್ಲಿ " ಜೀಜಾವು ಜಲಭಾಗ್ಯ ಯೋಜನೆ" ಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ನಿಗಮದ ಮೊದಲನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ "ಜೀಜಾವು– ಜಲಭಾಗ್ಯ ಯೋಜನೆ" (ಗಂಗಾ ಕಲ್ಯಾಣ ನೀರಾವರಿ ಯೋಜನೆ)ಗೆ ಆಯ್ಕೆ ಸಮಿತಿ ಹಾಗೂ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹಿಂವಕ 682 ಬಿಎಂಎಸ್ 2022**
**ಬೆಂಗಳೂರು, ದಿನಾಂಕ:19-11-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ "ಜೀಜಾವು– ಜಲಭಾಗ್ಯ ಯೋಜನೆ" (ಗಂಗಾ ಕಲ್ಯಾಣ ನೀರಾವರಿ ಯೋಜನೆ)ಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಡಿ ಬರುವ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸುತ್ತಿರುವ ಮಾರ್ಗಸೂಚಿ ಹಾಗೂ ನಿಯಮಗಳಂತೆಯೇ ಫಲಾನುಭವಿಗಳಿಗೆ DBT ಮೂಲಕ ಸಹಾಯಧನ ಮತ್ತು ಸಾಲ ಯೋಜನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಅನುಮತಿ ನೀಡಿ ಆದೇಶಿಸಿದೆ.

**ಷರತ್ತುಗಳು**

1. Expression of Interest (EoI) ಮೂಲಕ ಕೊಳವೆ ಬಾವಿಗಳನ್ನು ಕೊರೆಯುವ ಅರ್ಹ ಗುತ್ತಿಗೆದಾರರನ್ನು/ಏಜೆನ್ಸಿಗಳನ್ನು Empanelment ಮಾಡುವುದು
2. Expression of Interest (EoI) ಮೂಲಕ ಕೊರೆದ ಕೊಳವೆ ಬಾವಿಗಳಿಗೆ ಮೋಟರ್ ಮತ್ತು ಪಂಪ್‌ಸೆಟ್‌ಗಳನ್ನು ಅಳವಡಿಸಲು ಅರ್ಹ ಸರಬರಾಜು ಏಜೆನ್ಸಿಗಳನ್ನು Empanelment ಮಾಡುವುದು. ಏಜೆನ್ಸಿಗಳು ಮೋಟರ್ ಮತ್ತು ಪಂಪ್‌ಸೆಟ್‌ಗಳ ಸ್ವಯಂ ಉತ್ಪಾದಕರಾಗಿರಬೇಕು.

19/11/22

3. Expression of Interest ಕರೆಯಲು ಕೊಳವೆ ಬಾವಿ ಕೊರೆಯಲು ಮತ್ತು ಮೋಟರ್ ಹಾಗೂ ಪಂಪ್‌ಸೆಟ್ ಸರಬರಾಜಿಗೆ specifications ಗಳೊಂದಿಗೆ ಪ್ರತ್ಯೇಕವಾಗಿ Empanelment ಗಳನ್ನು ಜಿಲ್ಲಾವಾರು ಅಥವಾ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುವಂತೆ ರಾಜ್ಯ ಮಟ್ಟದಲ್ಲಿ Expression of Interest (EoL) ಕರೆಯಲು ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಿದ್ಧಪಡಿಸಿ ಸಲಹಾ ಸಮಿತಿಗೆ ಮಂಡಿಸಿ ಅನುಮೋದನೆ ಪಡೆಯುವುದು. ಅದರಂತೆ Empanelment ಸಮಿತಿಯು ಏಜೆನ್ಸಿಗಳನ್ನು Empanel ಮಾಡಲು ಕ್ರಮವಹಿಸುವುದು.
4. ಎಂಪ್ಯಾನೆಲ್‌ಮೆಂಟ್ ಏಜೆನ್ಸಿಗಳಿಗೆ ಕೊಳವೆಬಾವಿ ಕೊರೆಯಲು ಐಟಂವಾರು (ಕೊಳವೆಬಾವಿ ಕೊರೆಯಲು & ಕೇಸಿಂಗ್ ಪೈಪ್ ಇತ್ಯಾದಿ) ದರ ನಿಗದಿಪಡಿಸುವುದು. ಇದೇ ರೀತಿ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸಲು ಪ್ರತ್ಯೇಕವಾಗಿ ದರ ನಿಗದಿಪಡಿಸುವುದು. Expression of Interest ಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯಂತೆ Two Cover System ಅನ್ನು ಅಳವಡಿಸಿಕೊಳ್ಳುವುದು.
5. ಗಂಗಾ ಕಲ್ಯಾಣ ಯೋಜನೆಯಡಿ ಈ ಹಿಂದೆ ಇರುವಂತೆ "No Water No Money" ಷರತ್ತನ್ನು ವಿಧಿಸುವುದು.
6. ಆಯ್ಕೆಯಾದ ಫಲಾನುಭವಿಗಳಿಗೆ ಮಂಜೂರಾತಿ ಆದೇಶ ನೀಡುವುದು ಮತ್ತು ಎಂಪ್ಯಾನೆಲ್‌ಮೆಂಟ್ ಏಜೆನ್ಸಿಗಳ ಪಟ್ಟಿ ಒದಗಿಸುವುದು.
7. ಫಲಾನುಭವಿಗಳು ಎಂಪ್ಯಾನೆಲ್‌ಮೆಂಟ್ ಪಟ್ಟಿಯಲ್ಲಿರುವ ಯಾವುದೇ ಸಂಸ್ಥೆಯ ಮೂಲಕ ಕೊಳವೆಬಾವಿಗಳನ್ನು ಕೊರೆಯಿಸಿಕೊಳ್ಳಬಹುದು ಮತ್ತು ಪಂಪ್‌ಸೆಟ್‌ಗಳನ್ನು ಖರೀದಿಸಬಹುದು.
8. ಕೊಳವೆಬಾವಿಗಳನ್ನು ಕೊರೆದ ಬಗ್ಗೆ ಟಿ.ಡಿ.ಒ/ಆಯಾ ನಿಗಮದ ಅಧಿಕಲರಿಗಳು ಮತ್ತು ಫಲಾನುಭವಿಗಳು ಜಂಟಿಯಾಗಿ ವಾಸ್ತವವಾಗಿ ಅಳತೆ ಇತ್ಯಾದಿಗಳನ್ನು ಪರೀಕ್ಷಿಸಿ ಬಿಲ್ ಮಾಡಿ ಜಿಲ್ಲಾ ವ್ಯವಸ್ಥಾಪಕರಿಗೆ ಸಲ್ಲಿಸುವುದು ಮತ್ತು ಸಂಬಂಧಿಸಿದ ನಿಗಮಗಳು DBT ಮೂಲಕ ಪಾರದರ್ಶಕವಾಗಿ Empanelment ಸಮಿತಿಯ ಷರತ್ತಿಗೊಳಪಟ್ಟು ಫಲಾನುಭವಿಗಳಿಗೆ ಪಾವತಿಸುವುದು. ನಂತರ ಫಲಾನುಭವಿಗಳು ಗುತ್ತಿಗೆದಾರರು/ಏಜೆನ್ಸಿಗೆ ಪಾವತಿಸುವ ಬಗ್ಗೆ ಸೂಕ್ತ ತಂತ್ರಾಂಶ ಅಳವಡಿಸಿಕೊಳ್ಳುವುದು.
9. ಫಲಾನುಭವಿಗಳಿಗೆ ಕೊಳವೆಬಾವಿಗಳ ಘಟಕ ವೆಚ್ಚದ ಮಿತಿಯಂತೆ ಸಹಾಯಧನವನ್ನು DBT ಮೂಲಕ ನೀಡುವುದು.
10. ಕೊಳವೆಬಾವಿ ಕೊರೆಯಲು ತಗಲುವ ವಾಸ್ತವ ವೆಚ್ಚವನ್ನು ಘಟಕ ಸಹಾಯಧನದಲ್ಲಿ ಭರಿಸುವುದು.
11. ಕೊಳವೆಬಾವಿ ಕೊರೆಯಲು ಮತ್ತು ಪಂಪ್‌ಸೆಟ್ ಅಳವಡಿಸಲು ಸೇರಿ ತಗಲುವ ವೆಚ್ಚವು ಸಹಾಯ ಧನ ಮೊತ್ತವನ್ನು ಮೀರಿದಲ್ಲಿ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯು ತನ್ನ ಸ್ವಂತ ಮೂಲ ಅಥವಾ ನಿಗಮದಿಂದ ನೀಡಲಾಗುವ ಅವಧಿ ಸಾಲದ ಮೂಲಕ ಭರಿಸುವುದು.
12. ವಿದ್ಯುದ್ದೀಕರಣ ಮಾಡಲು ಈಗಿರುವಂತೆ ರೂ.50,000/- ಗಳನ್ನು ಸಂಬಂಧಪಟ್ಟ ಎಸ್ಕಾಂಗಳಿಗೆ ಪಾವತಿಸುವುದು.
13. ಈ ಬಗ್ಗೆ ತಂತ್ರಾಂಶ ಅಭಿವೃದ್ಧಿ ಪಡಿಸಿ ಅನುಷ್ಠಾನ ಮತ್ತು ನಿರ್ವಹಣೆ ಮಾಡಲು ತಗಲುವ ವೆಚ್ಚವನ್ನು ಆಯಾ ನಿಗಮಗಳ ಫಲಾನುಭವಿಗಳಿಗೆ ಅನುಗುಣವಾಗಿ ಆಯಾ ನಿಗಮಗಳು ಭರಿಸತಕ್ಕದ್ದು.
14. ಗಂಗಾ ಕಲ್ಯಾಣ ಯೋಜನೆಯಡಿ ಸಹಾಯಧನ ಮೊತ್ತವನ್ನು ಫಲಾನುಭವಿಗಳಿಗೆ ಮತ್ತು ಎಂಪ್ಯಾನೆಲ್‌ಮೆಂಟ್ ಏಜೆನ್ಸಿಗಳಿಗೆ ಹಣ ಪಾವತಿಸುವ ಬಗ್ಗೆ ಇ-ಆಡಳಿತ ಇಲಾಖೆಯು ಹೊಸ ತಂತ್ರಾಂಶವನ್ನು ರೂಪಿಸಿದಲ್ಲಿ, ಅದನ್ನು ಅಳವಡಿಸಿಕೊಳ್ಳುವುದು.
15. 2022-23 ನೇ ಸಾಲಿನ ಗಂಗಾ ಕಲ್ಯಾಣ ಗುರಿಗಳೊಂದಿಗೆ, ಹಿಂದಿನ ವರ್ಷಗಳಲ್ಲಿ ಮಂಜೂರಾಗಿ ಕೊರೆಯಲು ಬಾಕಿ ಇರುವ ಕೊಳವೆ ಬಾವಿಗಳನ್ನು ಫಲಾನುಭವಿಗಳಿಗೆ DBT ಮೂಲಕ ಸಹಾಯಧನ ಮತ್ತು ಸಾಲ ನೀಡಿ ಅನುಷ್ಠಾನಗೊಳಿಸುವುದು (ಈಗಾಗಲೇ ಕಾರ್ಯಾದೇಶ ನೀಡಿರುವ ಸಂಖ್ಯೆಯನ್ನು ಹೊರತುಪಡಿಸಿ).

19/11/22

....3